ದಿನಾಂಕ: 20-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಬಿ.ಎಚ್.ಎನ್. ವಾದಿ ಪರ ವಕೀಲರಿಂದಃ**

ನನ್ನ ಹೆಚ್ಚುವರಿ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

**ಪಾಟೀಸವಾಲುಃ ಶ್ರೀ.ಡಿ.ಎಸ್.ಬಿ. ಪ್ರತಿವಾದಿ 5 ರಿಂದ 8 ಪರ ವಕೀಲರಿಂದಃ**

ಈ ದಾವೆ ಮಾಡುವಾಗ ನಮ್ಮ ವಕೀಲರಿಗೆ ನಮ್ಮ ಕುಟುಂಬದ ವಂಶಾವಳಿಯ ಬಗ್ಗೆ ನಾನು ಸರಿಯಾದ ಮಾಹಿತಿ ಕೊಟ್ಟಿರಲಿಲ್ಲ. ಕಾಲಹರಣ ಮಾಡುವ ಉದ್ದೇಶದಿಂದ ವಾದ ಪತ್ರದಲ್ಲಿ ವಂಶಾವಳಿಯನ್ನು ತಿದ್ದುಪಡಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಚ್ಚುವರಿ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತೋರಿಸಿರುವ ವಂಶಾವಳಿ ನಮಗೆ ಅನುಕೂಲ ಆಗದಿದ್ದರೂ ಸಹ ಸುಳ್ಳು ವಂಶಾವಳಿಯನ್ನು ತೋರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಎಸ್.ಬಿ.ಎನ್. ಪ್ರತಿವಾದಿ 1 ರಿಂದ 4 ಪರ ವಕೀಲರಿಂದಃ**

ಪ್ರತಿವಾದಿ 5 ರಿಂದ 8 ರವರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ